## ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

---

ಸಂ:ಕಂ:ವಿವಾದ: 17:2014-15 ದಿ: ೨೦-05-2016

ಉಪಸ್ಥಿತರು: ಜೆ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

ಕೆ.ಸಣ್ಣ ಮಲ್ಲಪ್ಪ ತಂದೆ: ಕೆ. ಕರಿಲಿಂಗಪ್ಪ
ಹಿರೇಹಾಳು ಗ್ರಾಮ ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

ಸಿದ್ದಮ್ಮ ಗಂಡ: ಕೆ. ಕರಿಲಿಂಗಪ್ಪ
ಹಿರೇಹಾಳು ಗ್ರಾಮ ಸಿರುಗುಪ್ಪ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ದಹಿವಾಡು ಸಂಖ್ಯೆ |
|---|---|---|---|---|
| ಹಿರೇಹಾಳು ಗ್ರಾಮ | 59/4 | 2-00 | 47/2013-14 | 110/2013-14 |
| ಹಿರೇಹಾಳು ಗ್ರಾಮ | 98C2 | 1-22 | | |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ **ಹಿರೇಹಾಳು ಗ್ರಾಮದ** ಸ.ನಂ. 59/4 ವಿಸ್ತೀರ್ಣ 2-00, 98C2 ವಿಸ್ತೀರ್ಣ 1-22 ಎಕರೆ ಜಮೀನಿಗೆ ಸಂಭಂದಿಸಿದಂತೆ ಪಾಲು ವಿಭಾಗ ಪತ್ರ ಪ್ರಕಾರ ಕೆ. ಸಣ್ಣ ಮಲ್ಲಪ್ಪ ತಂದೆ: ಕೆ. ಕರಿಲಿಂಗಪ್ಪ ಇವರ **ಹೆಸರಿನಲ್ಲಿ** ಖಾತೆ ಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ಸಿದ್ದಮ್ಮ** ಗಂಡ: ಕೆ. ಕರಿಲಿಂಗಪ್ಪ ಹಿರೇಹಾಳು **ಗ್ರಾಮ** ಇವರು ದಿ: **30-4-2014** ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನುದಿ: **21-8-2015, 18-9-2015, 16-11-2015, 28-3-2016, 2-4-2016, 15-4-2016 ಮತ್ತು 13-5-2016** ರಂದು ಪ್ರಕರಣಕ್ಕೆ ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳು

ವಾದಿಗಳಾದ ಕೆ. ಸಣ್ಣಮಲ್ಲಪ್ಪ ತಂದೆ: ಕೆ. ಕರಿಲಿಂಗಪ್ಪ ಹಿರೇಹಾಳು ಗ್ರಾಮ ಇವರು ಹಿರೇಹಾಳು ಗ್ರಾಮದ ಸ.ನಂ. 59/4 ವಿಸ್ತೀರ್ಣ **2-00, 98C2** ವಿಸ್ತೀರ್ಣ **1-22** ಎಕರೆ ಜಮೀನುಗಳು ಪಾಲು ವಿಭಾಗ ಪತ್ರಪ್ರಕಾರ ಪಟ್ಟ ವರ್ಗಾವಣೆಗಾಗಿ ಅರ್ಜಿಸಲ್ಲಿಸಲಾಗಿ ನನ್ನ ತಾಯಿಯಾದ ಸಿದ್ದಮ್ಮ ಗಂಡ: ಕೆ.ಕರಿಲಿಂಗಪ್ಪ ಇವರು ತಕರಾರು ಅರ್ಜಿ ಸಲ್ಲಿಸಿದ್ದು ಈಗ ದೊಡ್ಡ ಮನುಷ್ಯರ ಸಮಕ್ಷಮದಲ್ಲಿ ಪಂಚಾಯಿತಿ ನಿರ್ವಹಿಸಿ ಆ ಪ್ರಕಾರವಾಗಿ ಪ್ರತಿ ವರ್ಷಕ್ಕೆ 10 ಚೀಲ (70 ಕೆ.ಜಿ.ಭರ್ತಿ) ನೆಲ್ಲು ಜೀವನ ಇರುವ ಪರ್ಯಂತ ಜೀವನಾಂಶಕ್ಕಾಗಿ ನೀಡುವಂತೆ ತೀರ್ಮಾನಿಸಿದ್ದರಿಂದ ಪರಸ್ಪರ ಒಪ್ಪಿಗೆ ಸೂಚಿಸಿದ್ದರಿಂದ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದಿರುತ್ತಾರೆ. ನನ್ನ ಹೆಸರಿಗೆ ಪಾಲು ವಿಭಾಗ ಪತ್ರ ಪ್ರಕಾರ ಪಟ್ಟ ವರ್ಗಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಸಿದ್ದಮ್ಮ ಗಂಡ: ಕೆ.ಕರಿಲಿಂಗಪ್ಪ ಹಿರೆಹಾಳು ಗ್ರಾಮ ಇವರು ಹಿರೇಹಾಳು ಗ್ರಾಮದ ಸ.ನಂ. 59/4 ವಿಸ್ತೀರ್ಣ **2-00, 98C2** ವಿಸ್ತೀರ್ಣ **1-22** ಎಕರೆ ಜಮೀನುಗಳು ಕೆ.ಸಣ್ಣ ಮಲ್ಲಪ್ಪ ತಂದೆ: ಕೆ. ಕರಿಲಿಂಗಪ್ಪ ಇವರ ಹೆಸರಿನಲ್ಲಿ ಪಟ್ಟ ವರ್ಗಾವಣೆಗೆ ತಕರಾರು ಅರ್ಜಿಸಲ್ಲಿಸಿರುತ್ತೇನೆ. ಈಗ ದೊಡ್ಡಮನುಷ್ಯರ ಸಮಕ್ಷಮ ದಲ್ಲಿ ಪಂಚಾಯಿತಿ ನಿರ್ವಹಿಸಿ ಆ ಪ್ರಕಾರವಾಗಿ ಪ್ರತಿ ವರ್ಷಕ್ಕೆ 10 ಚೀಲ (70 ಕೆ.ಜಿ.ಭರ್ತಿ) ನೆಲ್ಲು ಜೀವನ ಇರುವ ಪರ್ಯಂತ ಜೀವನಾಂಶಕ್ಕಾಗಿ ನೀಡುವಂತೆ ತೀರ್ಮಾನಿಸಿದ್ದರಿಂದ ಪರಸ್ಪರ ಒಪ್ಪಿಗೆ ಸೂಚಿಸಿದ್ದರಿಂದ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದಿರುತ್ತೇನೆ. ಕೆ.ಸಣ್ಣ ಮಲ್ಲಪ್ಪ ತಂದೆ: ಕೆ.ಕರಿಲಿಂಗಪ್ಪ ಇವರ ಹೆಸರಿಗೆ ಪಾಲು ವಿಭಾಗ ಪತ್ರ ಪ್ರಕಾರ ಪಟ್ಟ ವರ್ಗಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಪಾಲು ವಿಭಾಗ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಹಿರೇಹಾಳು ಗ್ರಾಮದ ಸ.ನಂ.59/4 ವಿಸ್ತೀರ್ಣ **2-00, 98C2** ವಿಸ್ತೀರ್ಣ **1-22** ಎಕರೆ ಜಮೀನು ಪಾಲು ವಿಭಾಗ ಪತ್ರ ಪ್ರಕಾರ ಕೆ.ಸಣ್ಣ ಮಲ್ಲಪ್ಪ ತಂದೆ: ಕೆ. ಕರಿಲಿಂಗಪ್ಪ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

**ಈ ಆದೇಶವನ್ನು ದಿನಾಂಕ: ೨೦-05-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.**

20/5/16

ಉಪ ತಹಶೀಲ್ದಾರರು,
ಕರೂರು.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕರೂರು.
ಸಿರುಗುಪ್ಪ ತಾಲ್ಲೂಕು

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ